ಸಿ.ಸಿ ನಂಬ್ರ: 266/2023
ಪಿ.ಡಬ್ಲ್ಯೂ : 2

ದಿನಾಂಕ: 07-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಎಸ್. ವಕೀಲರಿಂದ

1. ನನಗೆ ಈ ಪ್ರಕರಣದ ಪಿರ್ಯಾದಿದಾರ 13 ವರ್ಷಗಳಿಂದ ಪರಿಚಿತನಿರುತ್ತಾನೆ. ನಿ.ಪಿ.11 ರಲ್ಲಿರುವ ನನ್ನ ಸಹಿಯನ್ನು ಬನ್ನಾಡಿ ಸೋಮನಾಥ ಹೆಗ್ಡೆಯವರ ಕಚೇರಿಯಲ್ಲಿ ಮಾಡಿರುತ್ತೇನೆ. ಸೆಪ್ಟೆಂಬರ್ 6, 2021 ರಲ್ಲಿ ಸಹಿ ಮಾಡಿರುತ್ತೇನೆ. ಕರಾರನ್ನು ತಯಾರಿಸಿದ್ದು ವಕೀಲರು. ನಾನು ಹೋದ ನಂತರ ವಕೀಲರು ಕರಾರನ್ನು ತಯಾರಿಸಿರುತ್ತಾರೆ. ಕರಾರನ್ನು ತಯಾರಿಸುವಾಗ ನಾನು, ಸನತ್, ವಿಮರ್ಶ್ ಆಳ್ವ, ರವಿಕಿರಣ್ ಡಿ.ಕೆ ಹಾಗೂ ವಕೀಲರು ಇದ್ದೇವು. ನಮ್ಮನ್ನು ವಕೀಲರ ಕಚೇರಿಗೆ ಬರುವಂತೆ ಹೇಳಿದ್ದು ಸನತ್ ಆಳ್ವ.

2. ಕರಾರಿಗೆ ಸನತ್, ವಿಮರ್ಶ್ ಆಳ್ವ, ಸಾಕ್ಷಿದಾರರಾಗಿ ನಾನು ಹಾಗೂ ರವಿಕಿರಣ್ ಡಿ.ಕೆ ಯವರು ಸಹಿ ಮಾಡಿರುತ್ತೇವೆ. ಸನತ್ ನ ಹತ್ತಿರ ಆರೋಪಿತ ಹಣವನ್ನು ತೆಗೆದುಕೊಳ್ಳುತ್ತಿದ್ದು ಅದನ್ನು ವಾಪಾಸು ಕೊಡು ಎಂದು ಹೇಳಿದಾಗ ಇಂತಿಂತ ದಿನದಲ್ಲಿ ಇಷ್ಟು ಹಣದಲ್ಲಿ ಕೊಡುತ್ತೇನೆ ಎಂದು ಕರಾರು ಮಾಡಿಕೊಟ್ಟಿದ್ದ. ಕರಾರು ತಯಾರಿಸಿದ ವಕೀಲರು ಸನತ್ ಗೆ ಪರಿಚಯ ಇರುತ್ತಾರೋ, ಇಲ್ಲವೋ ಎಂದು ಗೊತ್ತಿಲ್ಲ. ಈ ಕರಾರು ಆಗುವ ಪೂರ್ವದಲ್ಲಿ ಹಣ ಕೊಡುವ ಬಗ್ಗೆ ಡಿಸ್ಕಶನ್ ಆಗಿತ್ತು.

3. ವಕೀಲರ ಕಚೇರಿಯಲ್ಲಿ ಚೆಕ್ ನ್ನು ಕೊಟ್ಟಿರುವುದಿಲ್ಲ. ನಿ.ಪಿ.11 ರಲ್ಲಿರುವ ಪೆನ್ಸಿಲ್ ಗುರುತನ್ನು ವಕೀಲರು ಮಾಡಿರಬಹುದು. ದೂರುದಾರ ಹಾಗೂ ಆರೋಪಿತನ ಸಹಿಗಳ ಇಂಕುಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಾನು ಅಲ್ಲಿ ಒಂದೇ ಸಹಿ ಮಾಡಿರುತ್ತೇನೆ. ಆರೋಪಿತ ಹಾಗೂ ದೂರುದಾರರು 3 ಸಹಿಗಳನ್ನು ಮಾಡಿರುತ್ತಾರೆ. ಕರಾರು ಪತ್ರದಲ್ಲಿ ಆರೋಪಿತ 15,66,000/- ಪಿರ್ಯಾದಿದಾರನಿಗೆ ಕೊಡುವುದು ಬಾಕಿ ಇರುತ್ತದೆ ಎಂದು ಬರೆಯಲಾಗಿರುತ್ತದೆ. ಸನತ್ ಎಷ್ಟು ಎಷ್ಟು ಹಣ ಆರೋಪಿಗೆ ಕೊಟ್ಟಿದ್ದ ಎಂಬ ಬಗ್ಗೆ ಮಾತುಕತೆ ಆಗಿರುತ್ತದೆ. ಒಂದು ಹಂತದಲ್ಲಿ ಆರೋಪಿತ 4 ಲಕ್ಷ ವಾಪಾಸು ಕೊಟ್ಟ ಬಗ್ಗೆ ಮಾತುಕತೆ ಆಗಿತ್ತು.

4. ಕರಾರು ಪತ್ರ ಆಗುವಾಗ ಸ್ಟಾಂಪ್ ಪೇಪರ್ ನ್ನು ವಿಮರ್ಶ ಆಳ್ವ ಖರೀದಿ ಮಾಡಿರುತ್ತಾರೆ. ನಾನು ಆ ಸಮಯದಲ್ಲಿ 247. AI ನಲ್ಲಿ ಕೆಲಸ ಮಾಡುತ್ತಿದ್ದೆ. ಕರಾರಿಗೆ ಸಹಿ ಹಾಕಿದ ದಿನ ನನಗೆ ಕೆಲಸ ಇರಲಿಲ್ಲ, ರಜೆಯಲ್ಲಿ ಇದ್ದೆ. ನಾನು ಈಗ ಕಂಪೆನಿ ಬದಲಾಯಿಸಿರುತ್ತೇನೆ. ಆ ದಿನ ರಜೆ ಇದ್ದೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ನನ್ನ ಎದುರಿನಲ್ಲಿ ಆರೋಪಿತ ಯಾವುದೇ ಸಹಿಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ಯಾವುದೇ ಸಹಿ ಮಾಡದೇ ಇದ್ದರೂ ಸಹ ಆರೋಪಿತ ಸಹಿ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿ.ಪಿ.11 ರಲ್ಲಿ ಆರೋಪಿತನ ಹೆಸರಿನಲ್ಲಿ ಕಂಡು ಬರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಆರೋಪಿತ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ನಿ.ಪಿ.11 ನ್ನು ಯಾವುದೇ ವಕೀಲರ ಕಚೇರಿಯಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಸಹಿ ಮಾಡುವ ಪೂರ್ವದಲ್ಲಿ ಓದಿ ತಿಳಿದುಕೊಂಡಿರುತ್ತೇನೆ. ಆ ಸಮಯದಲ್ಲಿ ಬ್ಯಾಂಕ್ ಸ್ಟೇಟ್‌ಮೆಂಟ್ ಹೋಲಿಕೆ ಮಾಡಿ ನೋಡಿ ತಯಾರಿಸಲಾಗಿರುತ್ತದೆ. ನಿ.ಪಿ.11 ನ್ನು ಸೃಷ್ಟಿಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ